ಹಾಗಾಗಿ ಆ ತೋಟಗಳ ಹಿರಿತಲೆಗಳೆಲ್ಲಾ -ಹೆಚ್ಚು ಕಡಿಮೆ ಮಾಟಣ್ಣನ ಸಮಕಾಲೀನರು- ಹುರುಪಿನಿಂದ ಬಂದು ತೋಟ ಪಾರ ಕಾಯುವ ನೆಪದಲ್ಲಿ ಹಗಲೆಲ್ಲಾ ತಿರುಗಾಡಿ ಪಟೇಲರ ಯಾಲಕ್ಕಿ ಹಡ್ಲಿನ ಅಡಸಾಲೆಯಲ್ಲಿ ಕುಳಿತು ಸೇಂದಿ ಕುಡಿಯುತ್ತ ತಮ್ಮ ಬದುಕಿನ ಗತ ವೈಭವವನ್ನೆಲ್ಲಾ ಮೆಲುಕು ಹಾಕುತ್ತಿದ್ದರು.

ಅವರ ಸಂಭ್ರಮದ- ಬಗೆಗೆಲ್ಲಾ ಅರಿತಿದ್ದ ಮಾಟಣ್ಣ ಅವರನ್ನು ಮಾತಾಡಿಸುವ ನೆಪದಲ್ಲಿ ಒಮ್ಮೊಮ್ಮೆ ಅಡಸಾಲೆಯ ಕಡೆ ಹೋಗುತ್ತಿದ್ದ, ಅವನನ್ನು ಅತಿಥಿಯಂತೆ ಪರಿಗಣಿಸಿ ತಮ್ಮ ತಮ್ಮ ಪಾಲಿನ ಸೇಂದಿಯಲ್ಲಿ ಒಂದೊಂದು ಚಿಪ್ಪು ಕೊಟ್ಟು ಕಳಿಸುತ್ತಿದ್ದರು. ನಂತರದಲ್ಲಿ ಒಂದೆರಡು ಬಾರಿ ಹೋದಾಗ ಬೈನೆಗಾರನಿಗೆ ಹೇಳಿ ಒಂದೊಂದು ಬಾಟ್ಲಿ ಸೇಂದಿ ಸಾಲ ಕೊಡಿಸಿ ತಮ್ಮೊಂದಿಗೆ ಹರಟೆಗೆ ಕೂರಿಸಿಕೊಂಡಿದ್ದರು. ಇವೆಲ್ಲಾ ವಿಚಾರ ಬಾಲಪ್ಪನ ಹೆಂಡತಿಯ ಮುಖಾಂತರ ಮಾಟಣ್ಣನ ಸೊಸೆಯ ಕಿವಿಗೆ ಬಿದ್ದಿತ್ತು.

ಆದರೇನು ಮಾಡುವುದು? 'ಪಾಪ ಮುದುಕ... ಆಸೆ ಅಲ್ವಾ...' ಎಂದುಕೊಂಡು ಬಾಲಪ್ಪನ ಬಳಿ ಮಾತಾಡಿ ಹಣಗಳ್ಳು ಮಾಡಿಕೊಟ್ಟಿದ್ದರು. ಹಾಗಾಗಿ ತಿಂಗಳಿಗೆ ನೂರಿಪ್ಪತ್ತು ರೂಪಾಯಿಗೆ ಮಾಟಣ್ಣನಿಗೆ ದಿನಾ ಎರಡು ಬಾಟ್ಲೆ ಸೇಂದಿ ಸಿಕ್ಕಿ ಅವನೂ ಅಡಸಾಲೆಯ ಸದಸ್ಯನಾಗಿದ್ದ.

ಅಗಾಡಿಯಲ್ಲಿ ಬಂದಷ್ಟು ಬರಲಿ ಎಂದು ಮಳೆಗಾಲದಲ್ಲಿ ಭತ್ತ ಬೆಳೆಯುವುದೆಂದು ನಿಗದಿಯಾಗಿತ್ತು, ಇನ್ನು ಬೇಸಿಗೆಗೆ ಏನಾದರೂ ದುಡ್ಡಿನ ಬೆಳೆ ಮಾಡಬೇಕೆಂದು ಆಲೋಚಿಸಿದ್ದರು.

ಹಿಂದಿನ ಬಾರಿ ಊರಲ್ಲಿ ಕೆಲವರು ಬೆಲ್ಲಗೆಣಸು ಬೆಳೆದು ಲಾಭ ಮಾಡಿದ್ದರೆಂದು ತಿಳಿದಿದ್ದ ಮಾಟಣ್ಣನ ಮನೆಯವರೂ ಅದನ್ನೇ ಬೆಳೆಯುವುದೆಂದು ತೀರ್ಮಾನ ಮಾಡಿದರು.

ಎಲ್ಲಾ ಕಡೆಗೂ ನೀರು ಹರಿಯುವಂತೆ ಅಲ್ಲಲ್ಲಿಗೆ ಕಾಲುವೆ ಮಾಡಿಕೊಟ್ಟಿದ್ದರಿಂದ ಮಾಟಣ್ಣ ಹಗಲೆಲ್ಲಾ ಅಲ್ಲಿದ್ದು ನೀರು ಹಾಯಿಸುತ್ತಿದ್ದ. ಬಹಳ ಒಳ್ಳೆಯ ಬೆಳೆ ಬಂದಿತ್ತು. ಇನ್ನೇನು ಒಂದೆರಡು ದಿನದಲ್ಲಿ ಅದನ್ನು ಕಿತ್ತು ಮಾರಿ ಕೈತುಂಬಾ ದುಡ್ಡು ಎಣಿಸಿಕೊಳ್ಳಬಹುದೆಂದು ಮನೆಯವರೆಲ್ಲಾ ಕನಸು ಕಾಣುತ್ತಿದ್ದರು.

ಅವತ್ತು ನೇಗಿಲು ಬಿಟ್ಟು ಗೆಣಸು ಕೀಳಲು ಅನುಕೂಲವಾಗುವಂತೆ ಭೂಮಿಯ ಮೇಲೆ ಬೆಳೆದ ಸೊಪ್ಪನ್ನೆಲ್ಲಾ ಕುಯ್ದು ಹಾಕಿದ್ದರು. ಇನ್ನು ಒಮ್ಮೆ ತೆಳ್ಳ ತೆಳ್ಳಗೆ ನೀರು ಹಾಯಿಸಿದರೆ ಆಯಿತು, ಭೂಮಿ ಮೆದುವಾಗಿ ನೇಗಿಲು ಬಿಡಲು ಸುಲಭವಾಗುತ್ತದೆ ಎಂದುಕೊಂಡು ಮನೆಗೆ ಹೋಗಿದ್ದರು.

ಬೇಗ ಬೇಗ ನೀರು ಹಾಯಿಸಿ ಸಂಜೆ ನಾಲ್ಕರ ವೇಳೆಗೇ ಅಡಸಾಲೆ ಗೆಳೆಯರನ್ನು ಸೇರಿಕೊಂಡು ಸೇಂದಿ ಸಮಾರಾಧನೆಯಲ್ಲಿ ಭಾಗವಹಿಸಬೇಕು ಎಂದು ಅವಸರ ಪಡುತ್ತಲೇ ಅಂದು ಅಗಾಡಿ ಸಮೀಪಿಸಿದ್ದ ಮಾಟಣ್ಣ ಗೆಣಸಿನ ಗದ್ದೆಯಲ್ಲಿನ ದೃಶ್ಯ ಕಂಡು ಬೆಚ್ಚಿನಿಂತ. 'ಅರೆ ಇದೇನಿದು. ನಾಳೆ ಉತ್ತು ಗೆಣಸನ್ನು ತೆಗೆಯುವುದು ಎಂದು ನಿಗದಿಯಾಗಿದ್ದಲ್ಲವೇ. ಇದ್ಯಾರು ಇಷ್ಟು ಬೇಗ ಎಲ್ಲಾ ಉತ್ತು ಹಾಕಿರುವವರು' ಎಂದು ಅಚ್ಚರಿ ಪಡುತ್ತ ಗದ್ದೆಗೆ ನುಗ್ಗಿದ, ಅವನಿಗೆ ಅರಿವಾಗಿ ಹೋಯಿತು... ಕಾಡು ಹಂದಿಯ ಹಿಂಡು ಗದ್ದೆಗೆ ನುಗ್ಗಿ ಮೂಲೆ ಮೂಲೆಯನ್ನೂ ಬಿಡದಂತೆ ಭೂಮಿಯನ್ನು ಉಲ್ಟಿ ಗೆಣಸನ್ನೆಲ್ಲಾ ಲೂಟಿ ಮಾಡಿಬಿಟ್ಟಿವೆ. ಮನೆಯವರೆಲ್ಲರ ವರ್ಷದ ಶ್ರಮವೆಲ್ಲಾ ಈ ರೀತಿ ವ್ಯರ್ಥವಾಗಿ ಹೋಗಿದೆಯಲ್ಲಾ ಎನ್ನುತ್ತಾ ಮಾಟಣ್ಣ ಪರಿತಪಿಸತೊಡಗಿದ್ದ.

ಮರುದಿನ ಮಗ ರೋಷದಿಂದ ಎಂಬಂತೆ ಗದ್ದೆಯನ್ನೆಲ್ಲಾ ಒಂದು ಕಡೆಯಿಂದ ಉತ್ತು ಹಾಕಿದ, ಮೌನವಾಗಿದ್ದ ಮಾಟಣ್ಣನ ಸೊಸೆ ಗದ್ದೆಯನ್ನೆಲ್ಲಾ ತಿರುಗಾಡಿ ನಡುಬಗ್ಗಿಸಿ ಅಳಿದುಳಿದ ಗೆಣಸುಗಳನ್ನು ಆಯ್ದು ಮನೆಗೆ ತೆಗೆದುಕೊಂಡು ಹೋಗಿ ಮಕ್ಕಳಿಗೆ ಬೇಯಿಸಿಕೊಟ್ಟಿದ್ದಳು.

'ಇನ್ನು ಈ ಅಗಾಡಿಯ ಸಹವಾಸವೇ ಬೇಡ. ಪಾಳು ಬಿಡದೇ ವಾಸಿ' ಎಂದ ಮಗನ ಹತಾಶೆ ಕಂಡ ಮಾಟಣ್ಣನ ಕರುಳು ಚುರುಕ್ ಎಂದಿತು. 'ಹಂಗಂದ್ರೆ ಹೆಂಗೆ?' ಏನು ಇದೊಂದೇ ಬೆಳೇನಾ? ಆ ಊರು ಮುಂದಲ ಗದ್ದೆಲಿ ನಿಮ್ಮ ದೊಡ್ಡಪ್ಪನ ಮನೆಯವರು ಮೆಣಸಿನಕಾಯಿ ಬೆಳ್ದು ಈ ಸಲ ದುಡ್ ಮಾಡಿಲ್ವ?... ಹಸಿರು ಮೆಣಸಿನ ಕಾಯಿಗೆ ಒಳ್ಳೆ ರೇಟ್ ಐತೆ. ಈ ಸಲ ಅದೇ ಬೆಳೆ ಮಾಡಣ. ಅವಕ್ಯಾವ ಹಂದಿ ಕಾಟವೂ ಇಲ್ಲ' ಎಂದು ಸೊಸೆ ತನ್ನ ಗಂಡನಿಗೆ ಧೈರ್ಯ ತುಂಬುವ ಮಾತನಾಡಿದ್ದಳು.